<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸವಣೂರು.</u>

<u>ಸಿ.ಸಿ ಸಂಖ್ಯೆ: **700/2022**</u>

ಡಿಡಬ್ಲ್ಯೂ: 1
ದಿನಾಂಕ: 09-07-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಗಫರಸಾಬ ಹೂಲಿಕಟ್ಟಿ |
| ತಂದೆ/ಗಂಡನ ಹೆಸರು | - ಅಲ್ಲಾಬಕ್ಷ ಹೂಲಿಕಟ್ಟಿ |
| ವಯಸ್ಸು | - 43 ವರ್ಷ |
| ಉದ್ಯೋಗ | - ಖಾಸಗಿ |
| ವಾಸ ಸ್ಥಳ | - ಹುಬ್ಬಳ್ಳಿ |

<u>ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ ಎಂ.ಎಚ್.ಜೆ. ವಕೀಲರಿಂದ</u>

ಈ ಪ್ರಕರಣದಲ್ಲಿ ನಾನು ಆರೋಪಿತನಾಗಿರುತ್ತೇನೆ. ಸಾಕ್ಷಿಯು ಒಂದು ದಾಖಲೆಯನ್ನು ಹಾಜರುಪಡಿಸಿದ್ದು ಅದು ದೊಡ್ಡಹನುಮಂತಪ್ಪ ತಂದೆ ತಿಪ್ಪಣ್ಣ ಅರಿವಾಳ ರವರ ಜಾಗದಲ್ಲಿ ವ್ಯವಹಾರವನ್ನು ಶುರು ಮಾಡಲು ಗೌಸ್‌ಮುದ್ದೀನ ಬಿ. ಕರ್ಜಗಿ ಮತ್ತು ಆರೋಪಿತರಾದ ಗಫಾರಸಾಬ ಇವರುಗಳು ಬಾಡಿಗೆಗೆ ತೆಗೆದುಕೊಂಡಿದ್ದು ಸದರಿ ಬಾಡಿಗೆ ಕರಾರು ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ-1 ಎಂದು ಸಾಕ್ಷಿಯ ಸಹಿಯನ್ನು ನಿಡಿ-1(ಎ) ಎಂದು ಗುರುತಿಸಲಾಯಿತು.

2018 ರಲ್ಲಿ ಬಾಡಿಗೆ ಕರಾರುಪತ್ರವನ್ನು ಮಾಡಿಸಿಕೊಂಡು ಅದು ಒಟ್ಟು 5 ವರ್ಷಕ್ಕೆ ಎಂದು ಅದರಲ್ಲಿ ನಮೂದು ಮಾಡಿರುತ್ತೇವೆ. ಒಂದು ತಿಂಗಳಿಗೆ ರೂ.16,000/- ದಂತೆ ಬಾಡಿಗೆ ನೀಡಬೇಕಾಗಿತ್ತು. ಒಂದು ವರ್ಷದ ನಂತರ ಬಾಡಿಗೆ ಹೆಚ್ಚು ಮಾಡುವ ಕರಾರು ಇತ್ತು. ಬಾಡಿಗೆಯನ್ನು ನಾನು ಮತ್ತು ಗೌಸ್‌ಮುದ್ದೀನ್ ನೀಡಬೇಕಾಗಿತ್ತು. 2020 ರ ತನಕ ನನ್ನ ಮತ್ತು ಗೌಸ್‌ಮುದ್ದೀನ್ ವ್ಯವಹಾರ ಚೆನ್ನಾಗಿ ನಡೆಯಿತು. ನಂತರ ಗೌಸ್‌ಮುದ್ದೀನ್‌ರವರು partnership ಬೇಡ ಎಂದು ತಿಳಿಸಿ ಎಲ್ಲವನ್ನು ನೀನೇ ನೋಡಿಕೊ ಮತ್ತು ಎಲ್ಲ ಜಿಎಸ್‌ಟಿ, ಡೀಡ್ ಮತ್ತು ಬ್ಯಾಂಕ್ ಖಾತೆಗಳನ್ನು ನಿನ್ನ ಹೆಸರಿಗೆ ಮಾಡಿಕೊಡುತ್ತೇನೆ ಎಂದು ಒಂದು ಅಗ್ರಿಮೆಂಟ್ ಬರೆದು ಕೊಟ್ಟರು. ನಂತರ ನಮ್ಮ ಮತ್ತು ಗೌಸ್‌ಮುದ್ದೀನ್‌ರ partnership ರದ್ದುಗೊಳಿಸುವ ಸಲುವಾಗಿ ರೂ.500/- ಛಾಪಾಕಾಗದ ತಂದು ಕೊಟ್ಟರೂ ಸಹ ಸುಮಾರು ಒಂದೂವರೆ ವರ್ಷದ ತನಕ ಅವರು ಮತ್ತು ಅವರ ಮನೆಯವರು ಯಾವುದೇ ಪ್ರತಿಕ್ರಿಯೆ ನೀಡದೇ

ಸಹಿ ಮಾಡಿರುವುದಿಲ್ಲ.

ನಂತರ ಜಿಎಸ್‌ಟಿ ಸಲುವಾಗಿ 2021 ರಲ್ಲಿ ನಾನು ಗೌಸ್‌ಮುದ್ದೀನ್‌ರ ಮನೆಗೆ ಹೋಗಿದ್ದು ಅವರು ನಾನು ಬಂದು ಸರಿ ಮಾಡಿಕೊಡುತ್ತೇನೆ ಎಂದು ಹೇಳಿದ್ದು ಆದರೆ ಅವರು ಏನನ್ನೂ ಸಹ ಸರಿ ಮಾಡಿರುವುದಿಲ್ಲ. 2020 ರ ನಂತರ ಅಗ್ರಿಮೆಂಟ್ ಆಗಿದ್ದರೂ ಸಹ ಫ್ಯಾಕ್ಟರಿ ಶುರು ಆಗಿರುವುದಿಲ್ಲ. ಗೌಸ್‌ಮುದ್ದೀನ್‌ರವರು ಅಗ್ರಿಮೆಂಟ್ ಬರೆದು ಕೊಡುವ ಮೊದಲು ಒಟ್ಟು ಬಾಡಿಗೆ ರೂ.1,50,000/- ಬಾಕಿ ಇತ್ತು. 2020 – 2022 ರವರೆಗೆ ಒಟ್ಟು 4 – 5 ಲಕ್ಷದವರೆಗೆ ಬಾಡಿಗೆ ಬಾಕಿ ಇತ್ತು. ನಂತರ 2021 ರಲ್ಲಿ ನಾನು ಫ್ಯಾಕ್ಟರಿಗೆ ಹೋದಾಗ ದೊಡ್ಡಹನುಮಂತಪ್ಪ ಅರಿವಾಳರವರು ನನಗೆ ಕಾಲಿಡಲು ಬಿಟ್ಟಿರುವುದಿಲ್ಲ ಏಕೆಂದರೆ ನಾವು ಯಾವುದೇ ಬಾಡಿಗೆ ನೀಡಿರುವುದಿಲ್ಲ. ಗೌಸ್‌ಮುದ್ದೀನ್‌ರವರು ಬರೆದು ಕೊಟ್ಟ ಅಗ್ರಿಮೆಂಟ್‌ನಂತೆ ನಡೆದುಕೊಳ್ಳದೇ ಇದ್ದದ್ದರಿಂದ, partnership ರದ್ದುಗೊಳಿಸಲು ಸಹಿ ಮಾಡದೇ ಇದ್ದುದರಿಂದ ಮತ್ತು ಬಾಡಿಗೆ ಹಣವನ್ನು ನೀಡದೇ ಇದ್ದುದರಿಂದ ಫ್ಯಾಕ್ಟರಿ ನಡೆಸಲು ಆಗಿರುವುದಿಲ್ಲ.

ಗೌಸ್‌ಮುದ್ದೀನ್‌ರವರು ಅಗ್ರಿಮೆಂಟ್ ಮಾಡಿಕೊಟ್ಟಂತೆ ನಡೆದುಕೊಳ್ಳದೇ ಇದ್ದುದರಿಂದ ಮತ್ತು ಬಾಡಿಗೆ ಹಣ ನೀಡದೇ ಇದ್ದುದರಿಂದ ನಾನು ಫ್ಯಾಕ್ಟರಿ ನಡೆಸಲು ಆಗಿರುವುದಿಲ್ಲ. ಆದ ಕಾರಣ ನನಗೆ ಅಂದಾಜು 15 ಲಕ್ಷ ಲುಕ್ಸಾನ ಆಗಿದೆ. ಈ ಕಾರಣ ಸಾಲಗಾರರು ನಮ್ಮ ಮನೆಗೆ ಬರುತ್ತಿದ್ದಾರೆ. ಫ್ಯಾಕ್ಟರಿ ನಡೆಲು ಇದ್ದ ಎಲ್ಲ ಮಿಷಿನ್‌ಗಳು ನಾವು ಬಾಡಿಗೆಗೆ ತೆಗೆದುಕೊಂಡ ಜಾಗದಲ್ಲಿಯೇ ಇದೆ. ಆದ ಕಾರಣ ಫಿರ್ಯಾದಿದಾರರ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತು ನನಗೆ ಆದ ನಷ್ಟವನ್ನು ಭರಿಸಲು ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಗೌಸ್‌ಮುದ್ದೀನ್‌ರವರು ಹೂಡಿರುವ ಪ್ರಕರಣವನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

<u>ಪಾಟೀ ಸವಾಲು: ಫಿರ್ಯಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ನೀಡಲಾಯಿತು.</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.

Accused is present. Complainant is absent. Sri MHJ advocate has filed has filed application U/s 91 of Cr.PC seeking permission to produce documents alongwith document.

Sri MMR advocate submits it may be allowed. Heard both the parties. In view of submission made by the complainant counsel, said application is hereby allowed.

Accused is examined as DW1 and got marked Ex.D1 and1(a).

CC 700/2022

Sri MMR advocate prays time for cross of DW1.

Call on 30-07-2026.

CJ & JMFC, Savanur

Accused is present. Learned APP has filed application u/s 311 of Cr. PC seeking to recall CW1.

Learned APP submits no further evidence from prosecution side. Hence, matter is posted for compliance of Section 437(A) of Cr.PC and 313 statement of accused. Call on 18-06-2024.

Accused No.1, 2, 4 to 7 are present. Accused No. 3 absent. EP filed and same is allowed.

CW.1 and CW.4 are present and examined as PW.1 and PW.2 respectively and got marked Ex.P.1 and Ex.P.2. Learned APP prays for issuance of witness summons to CW.2, CW.3, CW.5 to CW.7. But material witnesses turned hostile. Hence, the prayer of learned APP is hereby rejected. There is no incriminating statement against the accused **persons**. Hence, 313 statement is hereby dispensed. Heard both the parties.

For judgment.

Call on 15-11-2024.

CJ & JMFC, Savanur